## ಚಂದನದ ಗೊಂಬೆ

ದಸರೆಯ ಹಬ್ಬವು ಮನೆಮನೆಯಲ್ಲಿ ಬೊಂಬೆ ಕೂರಿಸುವ ಸಂಪ್ರದಾಯವನ್ನು ಒಳಗೊಂಡಿದೆ. ಹಲವಾರು ಬಗೆಯ ಬೊಂಬೆಗಳಲ್ಲಿ 'ಚಂದನದ ಬೊಂಬೆ'ಗಳಿಗೆ ವಿಶಿಷ್ಟವಾದ ಸ್ಥಾನವಿದೆ. 'ಪಟ್ಟದ ಬೊಂಬೆ' ಗಳೆನ್ನಲಾಗುವ ಅವುಗಳನ್ನು 'ರಾಜ ರಾಣಿ' ಎಂದು ಭಾವಿಸಿ ಪೂಜಿಸಲಾಗುತ್ತದೆ. ಸಾಮಾನ್ಯವಾಗಿ ಅವುಗಳು ನಿಂತಿರುವ ಭಂಗಿಯಲ್ಲಿರುತ್ತವೆ. ಆದರೆ ನನ್ನ ಸ್ನೇಹಿತೆ ಶ್ರೀಮತಿ ವಿಜಯಲಕ್ಷ್ಮಿಯವರ ಸಂಗ್ರಹದಲ್ಲಿ ಅಪರೂಪದ ಈ ಕುಳಿತಿರುವ ಪಟ್ಟದ ಬೊಂಬೆಗಳು ವಿಶೇಷವಾಗಿ ಗಮನ ಸೆಳೆಯುತ್ತವೆ.

**– ಸೀತಾ ಎಸ್. ನಾರಾಯಣ, ಹರಿಹರ**





## ಹರಕೆ ಕಾಯಿಗಳ ಚಂದಾಲಿಂಗ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿಗೆ ಸೇರಿದ ಹನುಮಸಾಗರದ ಸನಿಹ ಪ್ರಾಚೀನ ಚಂದಾಲಿಂಗ ದೇವಾಲಯವಿದೆ. ಇಲ್ಲಿಗೆ ಬರುವ ಜನರು ತಮ್ಮ ಇಷ್ಟಾರ್ಥಗಳನ್ನು ಈಡೇರಿಸಿಕೊಳ್ಳಲು ತೆಂಗಿನ ಕಾಯಿಗಳನ್ನು ಕಟ್ಟುತ್ತಾರೆ. ದೇವಾಲಯದ ಎದುರಿಗಿರುವ ಕಬ್ಬಿಣದ ಸರಳುಗಳುಳ್ಳ ಸ್ಥಳದಲ್ಲಿ ತೆಂಗಿನ ಕಾಯಿಗೆ ಬಟ್ಟೆಯನ್ನು ಕಟ್ಟಿ ದೇವ ಸನ್ನಿಧಾನದಲ್ಲಿ ತಮ್ಮ ಹರಕೆಯನ್ನು ನಿವೇದಿಸಿಕೊಂಡು ಕಟ್ಟುತ್ತಾರೆ. ಈ ಹರಕೆ ಈಡೇರಿದಾಗ ತಾವು ಕಟ್ಟಿದ ಕಾಯನ್ನು ತೆಗೆದು ಪೂಜೆ ಸಲ್ಲಿಸಿ ಹೋಗುತ್ತಾರೆ.

**– ಡಾ.ಮಲ್ಲಿಕಾರ್ಜುನ ಕುಂಬಾರ, ರಾಜೂರ**

## ಬಳಸಿದ ಹಾಲಿನ ಕ್ಯಾನಿನಿಂದ ಕಲೆ

ಇದು ಎರಡು ವರ್ಷಗಳ ಹಿಂದೆ ನಾನು ಅಮೆರಿಕದ ಕ್ಯಾಲಿಫೋರ್ನಿಯಾಕ್ಕೆ ಹೋಗಿದ್ದಾಗ ಅಲ್ಲಿನ ಚೈನೀಸ್ ಶಾಲೆಯೊಂದರಲ್ಲಿ ಕಂಡ ಕಲಾಕೃತಿ.

ಅದು ಅಮೆರಿಕದಲ್ಲಿ ನೆಲೆಸಿರುವ ಚೀನಾದ ಮಕ್ಕಳಿಗಾಗಿ ಚೈನೀಸ್ ಭಾಷೆ ಮತ್ತು ಸಂಸ್ಕೃತಿಯನ್ನು ಕಲಿಸುವ ಶಾಲೆ. ವಾರದ ರಜಾದಿನಗಳಂದು ಅಂದರೆ ಶನಿವಾರ ಮತ್ತು ಭಾನುವಾರಗಳಷ್ಟೇ ತೆರೆದಿರುತ್ತದೆ. ಆ ಶಾಲೆಯ ಮಕ್ಕಳು ಉಪಯೋಗಿಸಿ ಬಿಸುಟ ಹಾಲಿನ ಕ್ಯಾನಿನಿಂದ ಆಕರ್ಷಕ ಕಲಾಕೃತಿಯನ್ನು ನಿರ್ಮಿಸಿ ತರಗತಿ ಕೋಣೆಯಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದಾರೆ. ಇದಕ್ಕಾಗಿ ನೂರಾರು ಹಾಲಿನ ಕ್ಯಾನುಗಳು ಬಳಕೆಯಾಗಿವೆ ಎನ್ನುತ್ತಾರೆ ಶಾಲೆಯ ಅಧ್ಯಾಪಕಿ ಜೋಸ್ಲಿನ್. ಅಮೆರಿಕದಲ್ಲಿ ಹಾಲನ್ನು ಇಲ್ಲಿಯಂತೆ ಕೊಟ್ಟೆಗಳಲ್ಲಿ ಮಾರದೆ ದೊಡ್ಡ ದೊಡ್ಡ ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ಮಾರಾಟ ಮಾಡುತ್ತಾರೆ.

**– ಸಹನಾ ಕಾಂತಬೈಲು, ಮಡಿಕೇರಿ**

